## ಮುಧೋಳ ಸಾರ್ವತ್ರಿಕ ಆಸ್ಪತ್ರೆಗೆ ಔಷಧಿ ಒದಗಿಸಂವ ಬಗ್ಗೆ.

೨೦೧೨. ಶ್ರೀ ಬಿ. ಜಿ. ಜವಳಿ (ಮುಧೋಳ).–ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ ಸಾರ್ವತ್ರಿಕ ಆಸ್ಪತ್ರೆಗೆ ಪ್ರತಿವರ್ಷ ಔಷಧಕ್ಕೆ ಸರಕಾರದವರು ಎಷ್ಟು ಖರ್ಚು ಮಾಡುತ್ತಿದ್ದಾರೆ ?

ಆ) ಇದರಿಂದ ಇಲ್ಲಿಯ ರೋಗಿಗಳಿಗೆ ಸಾಕಷ್ಟು ಔಷಧಿಗಳು ದೊರಕುತ್ತಿದೆಯೇ ?

ಇ) ಹಾಗಿಲ್ಲದಿದ್ದರೆ, ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೧೯೮೩–೮೪, ೧೯೮೪–೮೫, ೧೯೮೫–೮೬ರ ಸಾಲಿನಲ್ಲಿ ಈ ಆಸ್ಪತ್ರೆಗೆ ಒದಗಿಸಲಾದ ಔಷಧಗಳ ವಿವರ ಹೀಗಿದೆ.

| | ೧೯೮೩–೮೪ | ೧೯೮೪–೮೫ | ೧೯೮೫–೮೬ |
|---|---|---|---|
| ಸರ್ಕಾರಿ ಔಷಧಿಗಳಿಗೆ ಬೆಂಗಳೂರಿನಿಂದ | ೧೨,೯೪೮–೪೪ | ೨,೫೪೯–೭೫ | ೨೮,೫೧೪–೫೨ |
| ವೈದ್ಯಾಧಿಕಾರಿಗಳಿಂದ ನೇರ ಖರೀದಿ ಮಾಡಲ್ಪಟ್ಟದ್ದು. | ೧,೫೭೬–೯೬ | ೪,೮೭೫–೫೩ | ೩,೩೫೮–೩೪ |

ಆ) (ಇಲ್ಲ).
೧೯೮೫–೮೬ನೇ ಸಾಲಿನಲ್ಲಿ ಪರಿಸ್ಥಿತಿ ಸುಧಾರಿಸಿದೆ.

ಇ) ೧೯೮೫–೮೬ನೇ ಸಾಲಿನಲ್ಲಿ ಔಷಧಿಗಾಗಿ ೩೧,೨೫೦ ರೂ.ಗಳನ್ನು ಅಧಿಕವಾಗಿ ಬಿಡುಗಡೆ ಮಾಡಿದ್ದು, ತಾರೀಖು. ೧೪–೨–೮೬ ರಂದು ೧೨,೦೩೧–೭೧ ರೂ.ಗಳಷ್ಟು ಮೌಲ್ಯದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

## ರಾಜ್ಯದಲ್ಲಿ ಸರಕಾರಿ ವೈದ್ಯರುಗಳ ಬಗ್ಗೆ

೮೧೫. ಶ್ರೀ ಆರ್. ವೆಂಕಟರಾವಮಯ್ಯ (ವಂಗಳಬಾಗಿಲು) ಮಾನ್ಯ ಆರೋಗ್ಯ ವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಎಂಬಿಬಿಎಸ್ ವಂತ್ತು ಸರ್ಕಾರದ ಕಾಲೇಜುಂಗಳಲ್ಲಿ ಆಯುರ್ವೇದಿಕ್ ಪದವಿ ಪಡೆದು ಖಾಸಗಿ ಮತ್ತು ಸರ್ಕಾರದ ವೈದ್ಯರುಗಳಾಗಿ ಸೇವೆ ಮಾಡುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು?

ಆ) ಅಂಗೀಕೃತವಲ್ಲದ ವೈದ್ಯರುಗಳಿಂದ ಪ್ರಾಣಹಾನಿ ಇತ್ಯಾದಿ ಅನಾಹುತಗಳು ನಡೆದಿಲ್ಲವೆ, ಬಾಗೇಪಲ್ಲಿಯಲ್ಲಿ ವಿದ್ಯಾರ್ಥಿಯೊಬ್ಬರು ಸಾವಿಗೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ರಾಜ್ಯದಲ್ಲಿ ಇಂತಹ ಅನಾಹುತಗಳು ಎಷ್ಟು ನಡೆದಿವೆ.

ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಕೊಂಡಿರುವ ಕ್ರಮ ಏನು?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ವಂತ್ರಿಗಳು)—

ಸರ್ಕಾರಿ ಸೇವೆಯಲ್ಲಿ ಇರುವ ವೈದ್ಯರುಗಳ ಮಾಹಿತಿ ಈ ಕೆಳಕಂಡಂತೆ ಇದೆ.

ಎಂ.ಬಿ.ಬಿ.ಎಸ್ — ೪೧೫೦

ಆಯುರ್ವೇದ್ — ೩೩೫

ಖಾಸಗಿ ವೈದ್ಯರುಂಗಳ ಮಾಹಿತಿ ಇಲ್ಲ.

ಸರ್ಕಾರದ ಸೇವೆಯಲ್ಲಿ ಇರುವವರೆಲ್ಲರೂ ಅಂಗೀಕೃತವಾದ ವಿದ್ಯಾರ್ಹತೆ ಹೊಂದಿದ ವೈದ್ಯರು ಗಳು. ಬಾಗೇಪಲ್ಲಿಯಲ್ಲಿ ಖಾಸಗಿ ಚಿಕಿತ್ಸಾಲಯದಲ್ಲಿ ರೋಗಿಯೊಬ್ಬರಿಗೆ ಖಾಸಗಿ ವೈದ್ಯರ ಸಹಾಯ ಕನು ರೋಗಿಗೆ ಚುಚ್ಚುಮದ್ದು ನೀಡಿದ ನಂತರ ಮೃತಪಟ್ಟ ಘಟನೆ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸರ್ಕಾರಿ ಆಸ್ಪತ್ರೆಗಳಲ್ಲಿ ಇಂತಹ ಅನಾಹುತಗಳು ನಡೆದಿಲ್ಲ.

ಈ) ಉದ್ಭವಿಸುವುದಿಲ್ಲ.

## ಬಂಗಾರು ಪೇಟೆಯಲ್ಲಿ ಆಸ್ಪತ್ರೆಯಂ ಸೌಲಭ್ಯಗಳಿಲ್ಲದಿರುವುದಂ

೧೫೪೨. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರು ಪೇಟೆಯ ಸರ್ಕಾರಿ ಆಸ್ಪತ್ರೆಗೆ ಅಳವಡಿಸಿರುವ ವ್ಯಾಪ್ತಿಗೆ ಬರುವ ಜನಸಂಖ್ಯೆಗನ್ನು ಗಣನವಾಗಿ ಇರುವ ವಾರ್ಡ್‌ಗಳ ಸಂಖ್ಯೆ ಎಷ್ಟು?

ಆ) ಆಸ್ಪತ್ರೆಗೆ ಹೊಸದಾಗಿ ಖಾಸಗಿ ವಾರ್ಡ್‌ಗಳನ್ನು ಕಟ್ಟಿಸಿಲ್ಲವೆ?

ಇ) ಆಸ್ಪತ್ರೆಯಂ ಬೆಡ್ ವಿಸ್ತರಣೆಯ ಬಗ್ಗೆ ಸರ್ಕಾರದವರಂ ಯೋಚಿಸಿರುವರೆ?

ಈ) ಹೆಚ್ಚಿನ ವೈದ್ಯಾಧಿಕಾರಿಗಳನ್ನು ಈ ಆಸ್ಪತ್ರೆಗೆ ನೇಮಕ ಮಾಡಲು ಬೇಡಿಕೆ ಇಲ್ಲವೆ?

ಉ) ಈ ಬಗ್ಗೆ ತಕ್ಷಣ ತುರ್ತು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ಮಂತ್ರಿಗಳು).—

ಅ) ೧೦ ಹಾಸಿಗೆಗಳ ವಾರ್ಡ್ ಇರುತ್ತದೆ.

ಆ) ದಾನಿಗಳು ೧೨ ಹಾಸಿಗೆಗಳ ಎರಡು ವಾರ್ಡ್‌ಗಳನ್ನು ಕಟ್ಟಿಸಿದ್ದಾರೆ. (ಒಟ್ಟು ೨೪ ಹಾಸಿಗೆಗಳು)

ಇ) ಇದು ಪರಿಶೀಲನೆಯಲ್ಲಿದೆ.

ಈ) ಇದೆ.

ಉ) ಹಣಕಾಸಿನ ಪರಿಸ್ಥಿತಿಯಿಂದ ಸಧ್ಯಕ್ಕೆ ಸಾಧ್ಯವಾಗುವುದಿಲ್ಲ.

## ಸಂತೇಬಾಚನಹಳ್ಳಿ ಆಸ್ಪತ್ರೆ ವಸತಿ ಗೃಹಗಳ ಹಾಗೂ ಕಟ್ಟಡ ದುರಸ್ತಿ ಬಗ್ಗೆ

೧೯೮೨. ಶ್ರೀ ಕೃಷ್ಣ(ಕೃಷ್ಣರಾಜಪೇಟೆ).—ಮಾನ್ಯ ಆರೋಗ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ತಾಲ್ಲೂಕು ಸಂತೇ ಬಾಚನಹಳ್ಳಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡ ಹಾಗೂ ಆದರ ಸಿಬ್ಬಂದಿ ವರ್ಗದ ವಸತಿ ಗೃಹಗಳು ಬಿರುಕು ಬಿಟ್ಟು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡ ಹಾಗೂ ಸಿಬ್ಬಂದಿ ವರ್ಗದ ವಸತಿ ಗೃಹಗಳನ್ನು ಕೂಡಲೇ ದುರಸ್ತಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಡಿ. ಬಿ. ಇನಾಂದರ್ (ಆರೋಗ್ಯ ಮಂತ್ರಿಗಳು)

ಅ) ಬಂದಿದೆ.

ಆ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.